**ಕರ್ನಾಟಕ ಸರ್ಕಾರ**

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ. 647/2014**

ಪಿ.ಡಬ್ಲ್ಯೂ: 2

ಸಿ.ಡಬ್ಲ್ಯೂ: 3

ಸಾಕ್ಷಿದಾರರ ಹೆಸರು : ಬಸವರಾಜಪ್ಪ

ತಂದೆಯ ಹೆಸರು: :ಮಲ್ಲಪ್ಪ

ವಯಸ್ಸು : **56 ವರ್ಷ**

ಉದ್ಯೋಗ : ಬ್ಯಾಂಕ್ ಮ್ಯಾನೇಜರ್

ವಾಸಸ್ಥಳ : ಲಕ್ಕವಳ್ಳಿ

**ದಿನಾಂಕ:17-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ :** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

2012-13 ನೇ ಇಸವಿಯಲ್ಲಿ ನಾನು ಡಿಸಿಸಿ ಬ್ಯಾಂಕ್ ನ ಸೂಪರ್ ವೈಸರ್ ಆಗಿ ಕೆಲಸ ನಿರ್ವಹಿಸುತ್ತಿದ್ದೆ. ನನಗೆ ರೈತರಿಗೆ ಹಣ ನೀಡುವ ಸಲುವಾಗಿ ಉಸ್ತುವಾಗಿ ಮಾಡಿದ್ದು, ಅದಕ್ಕೆ ತನಿಖೆ ಮಾಡುವ ಅಧಿಕಾರವನ್ನು ಸಹ ನೀಡಿರುತ್ತಾರೆ. ಈ ಪ್ರಕರಣದಲ್ಲಿ ನಾನು ತನಿಖೆ ಮಾಡಿದ್ದು, ಆ ಸಮಯದಲ್ಲಿ ನನಗೆ ಆರೋಪಿಗಳಾದ ಆನಂದ್ ಮತ್ತು ಕೃಷ್ಣಮೂರ್ತಿರವರು ಹಣ ದುರುಪಯೋಗಪಡಿಸಿಕೊಂಡ ಬಗ್ಗೆ ತಿಳಿದುಬಂದಿರುತ್ತದೆ. 1 ನೇ ಆರೋಪಿ ಆನಂದ್ ರವರು 4,75,000/- ಹಣ ಹಾಗೂ ಕೃಷ್ಣಮೂರ್ತಿರವರು 5,75,000/- ಹಣವನ್ನು ದುರುಪಯೋಗಪಡಿಸಿಕೊಂಡಿರುವುದು ಕಂಡುಬಂದಿರುತ್ತದೆ. ಸದರಿ ವಿಚಾರವನ್ನು ಆಡಳಿತ ಮಂಡಳಿಯವರಿಗೂ ಮತ್ತು ಸಿಇ ಒ ರವರ ಗಮನಕ್ಕೂ ತಂದಿರುತ್ತೇನೆ ಹಾಗೂ ನನ್ನ ಬ್ಯಾಂಕ್ ಗೂ ವರದಿಯನ್ನು ಸಲ್ಲಿಸಿರುತ್ತೇನೆ. ತನಿಖೆಯಲ್ಲಿ ಆನಂದ್ ಮತ್ತು ಕೃಷ್ಣಮೂರ್ತಿಯವರು ಹಣವನ್ನು ದುರುಪಯೋಗಪಡಿಸಿಕೊಂಡ ಬಗ್ಗೆ ಒಪ್ಪಿಕೊಂಡಿದ್ದು, ಅವರ ಹೇಳಿಕೆಯನ್ನು ಸ್ಟಾಂಪ್ ಪೇಪರ್ ನಲ್ಲಿ ಬರೆಸಿ ಸಹಿ ಮಾಡಿಸಿಕೊಂಡಿದ್ದು, ಅದಕ್ಕೆ ಆಡಳಿತ ಮಂಡಳಿಯವರು ಮತ್ತು ನಾನು ಸಹ ಸಹಿ ಮಾಡಿದ್ದು, ಹಣವನ್ನು ವಾಪಾಸ್ಸು ಮಾಡುತ್ತೇವೆ ಎಂದು ಇಬ್ಬರು ಒಪ್ಪಿಕೊಂಡಿದ್ದು, ಕೃಷ್ಣಮೂರ್ತಿಯವರು ಹಣವನ್ನು ಎಲ್ಲಾ ಹಣವನ್ನು ಕಟ್ಟಿರುತ್ತಾರೆ. ಆನಂದ್ ರವರು ಸಹ ಹಣವನ್ನು ಕಟ್ಟಿ 2 ಲಕ್ಷದ 20 ಸಾವಿರ ಹಣವನ್ನು ಬಾಕಿ ಉಳಿಸಿರುತ್ತಾರೆ. ಉಳಿದ ಹಣವನ್ನು ಸಹ ವಾಪಾಸ್ಸು ನೀಡುತ್ತೇವೆ

ಎಂದು ಒಪ್ಪಿ ಪತ್ರ ಬರೆದುಕೊಟ್ಟಿರುತ್ತಾರೆ. ಆನಂದ್ ರವರು ಬಾಕಿ ಹಣವನ್ನು ನೀಡದೇ ಇರುವ ಕಾರಣ ಅವರ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಖಲಾದ ವಿಚಾರ ನನಗೆ ತಿಳಿದುಬಂದಿತ್ತು.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ಒಪ್ಪಂದದ ಪತ್ರ ಆಗಿದ್ದು, ಸದರಿ ದಾಖಲೆಯನ್ನು ಈಗಾಗಾಲೇ ನಿಪಿ-16 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-16(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು : ಆರೋಪಿತರ ಪರ ಶ್ರೀ ಟಿ ಆರ್ ಎಸ್ ವಕೀಲರಿಂದ.</u>**

ಮಂಜುನಾಥ್ ರವರು ಸುಮಾರು 25 ವರ್ಷಗಳಿಂದ ಪ್ರಾಥಮಿಕ ಕೃಷಿ ಸಹಕಾರ ಸಂಘದಲ್ಲಿ ಕಾರ್ಯ ನಿರ್ವಹಣಾ ಅಧಿಕಾರಿಯಾಗಿ ಕೆಲಸ ಮಾಡಿರುತ್ತಾರೆ. ನಾನು ಸೂಪರ್ ವೈಸರ್ ಆಗಿ 12 ವರ್ಷ ಕೆಲಸ ಮಾಡಿದ್ದು, ಬಾವಿಕೆರೆ ವಿಭಾಗದಲ್ಲಿ ಒಂದೂವರೆ ವರ್ಷ ತನಿಖೆ ಕೆಲಸವನ್ನು ಮಾಡಿರುತ್ತೇನೆ. ನಾವು ತನಿಖೆ ಮಾಡಿದ ನಂತರ ಹಣ ದುರುಪಯೋಗಪಡಿಸಿಕೊಂಡಿರುವ ಬಗ್ಗೆ ಗೊತ್ತಾಗಿರುತ್ತದೆ. ಹಣ ದುರಪಯೋಗಪಡಿಸಿಕೊಂಡಿರುವ ಬಗ್ಗೆ ಸಾಮನ್ಯ ಸಭೆಯನ್ನು ಮಂಡಿಸಿ, ಅದರ ಮೇರೆಗೆ ಕಾರ್ಯ ನಿರ್ವಹಣಾ ಅಧಿಕಾರಿ ಕ್ರಮವನ್ನು ಕೈಗೊಳ್ಳಬೇಕಾಗಿರುತ್ತದೆ ಎಂದರೆ ಸರಿ. ಸಾಮಾನ್ಯ ಸಭೆಯಲ್ಲಿ ತೀರ್ಮಾನವಾಗದೇ ಕಾರ್ಯ ನಿರ್ವಹಣಾ ಅಧಿಕಾರಿಗಳು ಸ್ವತಂತ್ರವಾಗಿ ಕಾನೂನು ಕ್ರಮ ಕೈಗೊಳ್ಳಲು ಬರುವುದಿಲ್ಲ ಎಂದರೆ ಸರಿ. ಆನಂದ್ ಮತ್ತು ಕೃಷ್ಣಮೂರ್ತಿಯವರು ಕೆಲಸಕ್ಕೆ ಸೇರಿದಾಗ ಭದ್ರತೆಗಾಗಿ ಜಾಮೀನುದಾರರನ್ನು ಕೊಡಬೇಕಾಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಆನಂದ್ ಮತ್ತು ಕೃಷ್ಣಮೂರ್ತಿಯವರು ನೀಡಿರುತ್ತಾರೆಂದು ನುಡಿದಿರುತ್ತಾರೆ. ಕೃಷ್ಣಮೂರ್ತಿಯವರು ಸಂಪೂರ್ಣ ಹಣವನ್ನು ವಾಪಾಸ್ಸು ನೀಡಿರುತ್ತಾರೆ. ಆನಂದ್ ರವರಿಂದ ಹಣವನ್ನು ವಸೂಲಿಗಾಗಿ 2 ನೇ ಆರೋಪಿಯು ಸಹಾಯಕ ಸಂಘಗಳ ಸಹಾಯಕ ನಿಬಂಧಕರ ಕಛೇರಿ, ತರೀಕೆರೆ ಉಪ ವಿಭಾಗದಲ್ಲಿ ದಾವೆ ಸಂಖ್ಯೆ 1/2014-15 ಅರ್ಜಿದಾರರಾಗಿ ಹೂಡಿರುತ್ತಾರೆಂದರೆ ಸರಿ. ಆ ದಾವೆಯು ದಿ: 20-10-2016 ರಂದು ತೀರ್ಮಾನವಾಗಿರುತ್ತದೆ ಎಂದರೆ ಸರಿ. ಆನಂದ್ ರವರಿಂದ ಹಣ ವಸೂಲಿ ಮಾಡಲು 2 ನೇ ಆರೋಪಿ ಎಲ್ಲಾ ಕಾನೂನು ಕ್ರಮ ಕೈಗೊಂಡಿರುತ್ತಾರೆಂದರೆ ಸರಿ. ಜಾಮೀನುದಾರರಿಂದಲೂ ಸಹ ಹಣ ವಸೂಲಿ ಮಾಡಿ ಪೂರ್ತಿ ಹಣ ಸಂದಾಯವಾಗಿದೆ ಎಂದರೆ ಸರಿ. ನಾನು ಪರಿಶೀಲನೆ ಮಾಡಿದಾಗ ಆನಂದ್ ಮತ್ತು ಕೃಷ್ಣಮೂರ್ತಿಯವರು ಹಣ ದುರುಪಯೋಗ

ಮಾಡಿಕೊಂಡಿರುವ ಬಗ್ಗೆ ಕಂಡುಬಂದಿರುತ್ತದೆ. 2ನೇ ಆರೋಪಿಯ ವಿರುದ್ಧ ಯಾವುದೇ ಕರ್ತವ್ಯ ಲೋಪ ನಿರ್ಲಕ್ಷತನ ಕಂಡುಬಂದಿರುವುದಿಲ್ಲ.

**<u>ಮರುವಿಚಾರಣೆಃ</u> ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಕೇ. ಸ. ಇ. ಎ. ಒ.

Sd/-

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**